ರಾಜ್ಯ ಸರ್ಕಾರವು ಕರ್ನಾಟಕ ರೇಷ್ಮೆ ಮಾರಾಟ ಮಂಡಳಿಗೆ ಮಾರುಕಟ್ಟೆ ಪ್ರವೇಶಿಸಿ ರೇಷ್ಮೆ ಧಾರಣೆ ಸ್ಥಿರಗೊಳಿಸಲು ರೂ.12.00 ಕೋಟಿ ಹಣವನ್ನು ಬಿಡುಗಡೆ ಮಾಡಿರುವುದಲ್ಲದೆ ವಾಣಿಜ್ಯ ಬ್ಯಾಂಕುಗಳಿಂದ ರೂ.25.00 ಕೋಟಿ ಸಾಲ ಪಡೆಯಲು ಗ್ಯಾರಂಟಿಯನ್ನು ನೀಡಿದೆ.

ರೇಷ್ಮೆ ಗೂಡುಗಳು ರೂ.160–00 ಕ್ಕಿಂತ ಕಡಿಮೆ ದರದಲ್ಲಿ ಮಾರಾಟವಾದಲ್ಲಿ ಮಾತ್ರ ಅಂತಹ ಪ್ರತಿ ಕೆ.ಜಿ. ಗೂಡಿಗೆ ರೂ.30.00 ರವರೆಗೆ ಸಂಕಷ್ಟ ಉಪ ಶಮನ ಕಾರ್ಯಕ್ರಮದಡಿ ನೆರವು ನೀಡುವ ಕಾರ್ಯ ಕ್ರಮವನ್ನು ದಿನಾಂಕ: 01/11/2011 ರಿಂದ 3 ತಿಂಗಳುಗಳ ಅವಧಿಯವರೆಗೆ ಹಮ್ಮಿಕೊಳ್ಳಲಾಗಿತ್ತು.

ರೇಷ್ಮೆ ಗೂಡು ಮತ್ತು ಕಚ್ಚಾ ರೇಷ್ಮೆಗೆ ಕನಿಷ್ಠ ಬೆಂಬಲ ಬೆಲೆ ನಿಗದಿಪಡಿಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಅಡಿಗಾಲುವೆ ನಿರ್ಮಿಸುವುದು

8 (25) ಡಾ: ಬಗಲಿ ಸಾರ್ವಭೌಮ ಸಾತಗೌಡ (ಇಂಡಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ವಿಧಾನಸಭಾ ಕ್ಷೇತ್ರದ ಶಿರಶ್ಯಾಡ ಗ್ರಾಮದಲ್ಲಿ ಅಡಿಗಾಲುವೆ ನಿರ್ಮಾಣ ಮಾಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ;

ಆ) ಈ ಕಾಮಗಾರಿಯನ್ನು ಎಂದು ಪ್ರಾರಂಭಿಸಲಾಗುವುದು? (ವಿವರ ಒದಗಿಸುವುದು)?

ಶ್ರೀ ಬಸವರಾಜ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಶಿರಶ್ಯಾಡ ಗ್ರಾಮದ ಹತ್ತಿರ ಪ್ರಸ್ತಾಪಿತಗೊಳ್ಳುವ ಮಸಳಿ–ಶಿರಶ್ಯಾಡ ರಸ್ತೆ ಸೇತುವೆ ಅಡಿಗಾಲುವೆ ಕಾಮಗಾರಿಯ ಪ್ರಸ್ತಾವನೆಗೆ ರೂ.365.75 ಲಕ್ಷ ಮೊತ್ತದ ಅಂದಾಜು ಪತ್ರಿಕೆಗೆ ನಿಗಮದಡಿ ಅನುಮೋದನೆ ನೀಡಿದೆ.

ಆ) ಶೀಘ್ರದಲ್ಲೇ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕಾಮಗಾರಿಯನ್ನು ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ.